(67)

ವಿವಿಧ ವಿಷಯ

ರಷ್ಯಾದಲ್ಲಿ 15 ವರ್ಷದಿಂದ ಒಬ್ಬ ಶಾಸ್ತ್ರಜ್ಞನು ನೂತನ ವಿಧದಲ್ಲಿ ಗೋಧಿ ಬೆಳೆ ಮಾಡುವುದನ್ನು ಕಂಡುಹಿಡಿದಿರುವನು; ಒಂದು ವರ್ಷ ಈ ಗೋಧಿ ಬೆಳೆ ನಾಟಾ ಹಾಕಿದರೆ ಮೂರು ವರ್ಷ ಬೆಳೆಯನ್ನು ತೆಗೆಯಬಹುದು. ಇವನಿಗೆ ಸ್ಟಾಲಿನ್ನಿಂದ ಒಂದು ಲಕ್ಷ ರೂಬೆಲ್ ಬಹುಮಾನ ಒದಿತು. ಹೋದ ವರ್ಷ ಖಾಜಕ್‌ಸ್ತಾನ್‌ನಲ್ಲಿ 2000 ಎಕರೆಯಲ್ಲಿ ಬಿತ್ತನೆ ಮಾಡಿದರು. ಈ ವರ್ಷ ಫಲ ತೆಗೆದುಕೊಂಡರು. ಇನ್ನೆರಡು ವರ್ಷ ನಾಟಾ ಮಾಡುವ ಕೆಲಸವಿಲ್ಲ. ಇಲ್ಲಿಯ ರೈತರೆಲ್ಲರೂ ರಣರಂಗಕ್ಕೆ ಹೋಗಲು ಅನುಕೂಲವಾಯಿತು.

ಅಮೇರಿಕಾದಲ್ಲಿ ಕೂಲಿಗಾರರಿಗೆ ವಾರಕ್ಕೆ ರೂ 110 ಸಂಬಳ ಕೊಡುವರು. ಈ ದೇಶದಲ್ಲಿ ?

ಕುದುರೆಗಳ ಅಥವಾ ಎತ್ತುಗಳ ಲಾಳಗಳು ರಸ್ತೆಯ ನೆಲೆ ಬಿದ್ದಿದ್ದರೆ, ಅವನ್ನು ತಂದುಕೊಡುವನರಿಗೆ ಒಂದಕ್ಕೆ ಒಂದಾಣೆಯಂತೆ ಕೊಡುವವಾಗಿ ಕರ್ನೂಲಿನ ಪೋಲೀಸು ಇಲಾಖೆಯವರು ಪ್ರಚಾರಪಡಿಸಿರುವರು.

ಫ್ರಾನ್ಸಿನಲ್ಲಿ ಕೃತ್ರಿಮ ಹಲ್ಲುಗಳಿಗೆ ಕೂಡ ಇನ್ನು ಮೇಲೆ ಶೇಷನಿಂಗ್ !

ಜರ್ಮನರು ತಯಾರಿಸುತ್ತಿದ್ದ ಏ. ಏ. ಗ್ಯಾಸ್ ಮಾಡುವ ರಹಸ್ಯವನ್ನು ಅಮೇರಿಕಾದವರು ತಿಳಿದುಕೊಳ್ಳಲು ಐದೂಕಾಲು ಕೋಟಿ ರೂಪಾಯಿಯನ್ನು ಗೂಢಚಾರರ ಮುಖಾಂತರ ಚೆಲ್ಲಿದರು. ಈಗ ಈ ಪ್ರವಾಹವು ನಿಂತಿದೆ. ಅಮೇರಿಕಾದ ಈ ರಹಸ್ಯವು ಇದುವರಿಗೆ ಹೊರಗೆ ತಿಳಿಯದಂತೆ ನೋಡಿಕೊಳ್ಳುತ್ತಿದ್ದರು.

ಇಂಗ್ಲೆಂಡಿನಲ್ಲಿದ್ದ ಒಂದು ಸ್ಪೇನ್ ಪುರಾತನ ದೇವಾಲಯವನ್ನು ಕೊಂಡು ಕೊಂಡು, ಕೊಂಡುಕೊಂಡ ಬೆಲೆಗೆ ಎರಡರಷ್ಟು ಖರ್ಚುಮಾಡಿ ಒಂದು ಹಡಗಿನಲ್ಲಿ ಅಮೇರಿಕಾಕ್ಕೆ ರವಾನಿಸುತ್ತಾರೆ. ಅಲ್ಲೇ ಈ ದೇವಾಲಯವನ್ನು ಕಟ್ಟುವರಂತೆ.

ಕಾಗದದ ಅಭಾವದಿಂದ ಇನ್ನು ಮುಂದೆ ಯಾವ ಅಂಗಡಿಗಳಲ್ಲಿಯೂ ಯಾವ ಪದಾರ್ಥಗಳನ್ನು ಹಳೇ ನ್ಯೂಸ್ ಪೇಪರ್ ಏನೂ ಬೇರೆ ಕಾಗದುಗಳಲ್ಲಿ ಕಟ್ಟಿಕೊಡ ಕೂಡದು. ಈ ಆಜ್ಞೆ ಆಹಾರ ಪದಾರ್ಥಗಳಿಗೆ ಅನ್ವಯಿಸುವುದಿಲ್ಲ.

ಈ ವರ್ಷ ಲಕ್ಕೋ ವಿಶ್ವವಿದ್ಯಾಸಿಲಯದವರು ಕಾನ್‌ವೆಕೇಷನ್ ನಡೆಸುವುದಿಲ್ಲ. ಡಿಗ್ರಿ ಪಡೆದವರು ಸರ್ಟಿಫಿಕೇಟುಗಳನ್ನು ಟಪಾಲಿನಲ್ಲಿ ವಿದ್ಯಾರ್ಥಿಗಳಿಗೆ ರವಾನಿಸುವರು.

ರಷ್ಯಾದವರೂ ಸಹ ಈಗ ಜರ್ಮಯ ಮೇಲೆ ವಿಮಾನ ಧಾಳಿಮಾಡಲು ಪ್ರಾರಂಭಮಾಡಿರುತ್ತಾರೆ. ಸಿನ್ನೆ ದಿವಸ ಕೋನಿಗ್ಸ್‌ಬರ್ಗ್ ಮೇಲೆ ಧಾಳಿಮಾಡಿ ಶತ್ರುವಿಗೆ ವಿಪರೀತ ನಷ್ಟನೂಡಿದರು.

ಆಸ್ಟ್ರೇಲಿಯಾ ಪ್ರಧಾನ ಮಂತ್ರಿಯಾದ ಮಿ|| ಕರ್ಟಿನ್‌ರವರು ಯುದ್ಧವು ಇ ಯುದ್ಧವು ಇನ್ನು ಕೆಲವು ವರ್ಷ ನಡೆಯಬಹುದೆಂದರು.

ಹರಿದ್ವಾರದಲ್ಲಿ ನಡೆದ ಹಿಂದೂ ಸಭಾ ಕಾನ್‌ಫರೆನ್ಸ್‌ನಲ್ಲಿ ರಾಜನಹೇಶ್ವರ್ ದಯಾಲ್ ಸೇಟ್. ಕೋಟ್ಯಾಧೀಶ್ವರರಾಜರುಬ್ರಿಟಿಷ್ ಗವರ್ನಮೆಂಟಿನವರಿಗೆ ಕೆಲಸಬಿಡಲು ಮನಸ್ಸಿಲ್ಲ ಈಜೆಗೆ ವೈಸರಾಯರು ಮಾಡಿದ ನಿರ್ಣಯವು ಇದರಿಂದ ವ್ಯಕ್ತವಾಗುತ್ತೆಂದರು.

ಮುಂಬಯಿ ಟೈಮ್ಸ್ ಆಫ್ ಇಂಡಿಯಾ ಆಂಗ್ಲೇಯ ವಾರ ಪತ್ರಿಕೆಯಲ್ಲಿ (ಪೇಜು 20 ತಾ 11—4—43) ಮೈಸೂರು ಮಹಾರಾಜರವರ ತಂಗಿ ಸನಂದ ಮತ್ತು ಅವರ ಕೊಟ್ಟಿಯುವರಾಜರವರ ಭಾವಚಿತ್ರಗಳನ್ನು ಛಾಪಿಸಿಲ್ಲವು ಬೆಂಗಳೂರಿನಲ್ಲಿ ನಡೆಯಿತೆಂದು ಬರೆದಿದೆ. ಇಷ್ಟೇಕೆ ಲಂಡನ್ ಟೈಮ್ಸ್ ಪತ್ರಿಕೆಯು ಹಿಂದಿನ ಯುದ್ಧದಲ್ಲಿ ಯುವರಾಜರ ಭಾವಚಿತ್ರವನ್ನು ಪ್ರಕಟಿಸಿ ಅದು ಮೈಸೂರು ಮಹಾರಾಜರ ಭಾವಚಿತ್ರವೆಂದು ಬರೆದಿರಲಿಲ್ಲವೇ ?

Founded 1917 SATYAVADI Oldest Newspaper of Mysore Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 142] ಸೋಮವಾರ 12—4—1943 [3 ಪೈ

ಬ್ರಾಹ್ಮಣರಿಲ್ಲದೆ ಆಗುವುದಿಲ್ಲ !

ಸರ್ ಸಿ. ವಿ. ರಾಮರ್ ಚರಿತ್ರೆಯನ್ನು ಬರೆದ ಜೋಕಿಂ ಆಲ್ವ ರವರು ಹೀಗೆ ಬರೆದಿರುವರು— ಮದ್ರಾಸು ಬ್ರಾಹ್ಮಣರು ಲೆಖ್ಖ ಮಾಡುವುದರಲ್ಲಿಯೂ ಆದಾಯವ್ಯಯದ ಬಜೆಟ್ ಮುಂತಾದುವುಗಳನ್ನು ತಯಾರ್ಮಾಡುವುದರಲ್ಲಿಯೂ ಅದ್ವಿತೀಯರು. ಇವರಿಗೆ ಸಮನಾದವರು ಹಿಂದೂಸ್ಥಾನದಲ್ಲಿ ಮತ್ತಾರೂ ಇಲ್ಲ. ಯಾವ ಪರೀಕ್ಷೆಯಲ್ಲಿ ಬೇಕಾದರೂ ಕೂರಿಸಿ ನೋಡಿ, ಇವರೇ ಮೊದಲನೆಯವರಾಗಿ ಬರುತ್ತಾರೆ. ಅಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಯಾಗುವವರ ಸಂಖ್ಯೆಯಲ್ಲಿ ಬಹುಭಾಗವು ಇವರಿಗೇ ಸಲ್ಲುವುದು. ಯಾವ ಕೆಲಸಕ್ಕೆ ಬೇಕಾದರೂ ಎಂತಹ ಕಠಿಣ ಪರೀಕ್ಷೆಯನ್ನು ಬೇಕಾದರೂ ಇಡಿ, ಎಷ್ಟು ಚಮತ್ಕಾರವಾದ ಪ್ರಶ್ನೆಯನ್ನು ಬೇಕಾದರೂ ಕೇಳಿ. ಈ ಮದರಾಸ್ ಬ್ರಾಹ್ಮಣರು ಸುಲಭದಲ್ಲಿ ಉತ್ತರ ಕೊಡುವರು. ಈ ಮದರಾಸು ಬ್ರಾಹ್ಮಣರು, ಅನ್ನ. ಬೇಳೆ. ತರಕಾರಿ, ಮಜ್ಜಿಗೆ ಇವನ್ನು ತಿಂಡು, ಯಾಗರೂ ಅಸಾಧ್ಯವಾದ ಸರ್ಕಾರಿ ಉದ್ಯೋಗವನ್ನು ದೆಹಲಿಯಲ್ಲಿಯೂ, ಸಿಂಲಾದಲ್ಲಿಯೂ ಸಂಪಾದಿಸಿರುವರು. ಇಂಡಿಯಾ ಸರ್ಕಾರದ ಆಡಿಟ್ ಮತ್ತು ಅಕೌಂಟ್ ಇಲಾಖೆಯಲ್ಲಿ ಸಮುದ್ರದಾಚೆಗೆ ಇವರಿಲ್ಲದ ಯಾವ ಶಾಖೆಯೂ ಇಲ್ಲ. ತಲತಲಾಂತರದಿಂದ ಇಂಡಿಯಾ ಸರ್ಕಾರದ ಫೈನಾನ್ಸ್ ಮೆಂಬರುಗಳು ಇಂಗ್ಲೆಂಡಿನಿಂದ ಬಂದವರೂ ಸಹ, ಈ ಮದರಾಸು ಬ್ರಾಹ್ಮಣರನ್ನು ತಮ್ಮಲ್ಲಿಟ್ಟುಕೊಂಡಿದ್ದರು. ಈಗ ಬ್ರಿಟಿಷ್ ಮಂತ್ರಿಮಂಡಲದಲ್ಲಿರುವ ಯುದ್ಧದ ಸೆಕ್ರೆಟರಿ ಸರ್ ಜೇಮ್ಸ್ ಗ್ರಿಗ್‌ರವರು ಸಹ ಬ್ರಾಹ್ಮಣರ ಸಹಾಯದಿಂದ ಕೆಲಸ ಜರುಗಿಸುತ್ತಿದ್ದರು. ಮುಂದೆ ಸ್ವರಾಜ್ಯ ಪದವಿ ಬಂದರೂ ಹಣಕಾಸಿನ ಇಲಾಖೆಗೆ ಈ ಮದರಾಸ್ ಬ್ರಾಹ್ಮಣರ ಸಹಾಯ ಬೇಕೇ ಬೇಕಾಗುವುದು. ಇವರು ಪಾರ್ಟ್‌ಹ್ಯಾಂಡ್ ರೈಟರ್ ಕೆಲಸದಿಂದ ಭಾರಿ ಉದ್ಯೋದಗಲ್ಲಿರುವರು, ಇವರಂತೆ ಕೆಲಸ ಮಾಡುವವರು ಮತ್ತಾರಿರುವರು ? ಇವರಿಲ್ಲದ ಇಲಾಖೆಯೇ ಇಲ್ಲ. ಇವರು ವೃತ್ತಪತ್ರಿಕಾ ಕ್ಷೇತ್ರದಲ್ಲಿಯೂ ಇರುತ್ತಾರೆ. ದೇಶಕ್ಕೆ ಇವರಿಂದ ಹೆಚ್ಚು ಪ್ರಯೋಜನವಿದೆ.

ಜಪಾನ್ ಪ್ರಧಾನ ಮಂತ್ರಿ

ಜಪಾನಿನ ಪ್ರಧಾನಮಂತ್ರಿ ಟೋಜೋಗೆ ಈಗ ಬಹಳ ಯೋಚನೆಯಾಗಿದೆ. ರಾತ್ರಿಯು ನೇಳೆಯಲ್ಲಿ ನಿದ್ರೆ ಒರುವುದಿಲ್ಲವಂತೆ ಸ್ವಪ್ನ ಸಹಾ ಕಾಣುತ್ತಾರಂತೆ ದಲ್ಲವೆ ? ಅಮೆರಿಕಾದವರು ಈಗ ತಯಾರಿಸುವ ಯುದ್ಧ ಸಾಮಗ್ರಿಗಳನ್ನು ನೋಡಿ ಭಯವಾಗಿರುವುದು. ಈಗ ಜಪಾನಿಗೆ ಮುಂದೆ ಏನಾಗಬಹುದೆಂಬ ಶಂಕೆಯುಂಟಾಗಿದೆ. ಈಗಲೂ ಟೋಜೋ ಒಂದು ಫಶೇಷ ನಡೆದು ಅದುಂದ ಜಯವಾಗಬಹುದೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿರುವನು ಈ 6 ತಿಂಗಳಲ್ಲಿ ಏನು ಗೆದಿದ್ದು ತನಗೆ ನಷ್ಟವೇ ಹೊರತು ಪ್ರಯೋಜನವಿಲ್ಲ ಈಗ ಜಪಾನಿನಲ್ಲಿ ತಯಾರಾಗಿರುವ ಯುದ್ಧ ಸಲಕರಣೆಗಳನ್ನು ನೋಡಿ ಭಯವಾಗಿದೆಯಂತೆ. ಮಿತ್ರರಾದ ಹಿಟ್ಲರ್ ಮುಸಲೋನಿಗಳಿಂದ ಏನೂ ಪ್ರಯೋಜನವಾಗದಿರುವುದು ಈಗ ಜಪಾನೇಯವಾಗಿರುವುದು. ಇವನೊಬ್ಬನೇ ಮಿತ್ರ ಶಕ್ತಿದವರ್ನ ಎದುರಿಸಬೇಕು. ಸಹಾಯಕ್ಕೆ ಬರುವವರು ಯಾರೂ ಇಲ್ಲದ ಹಾಗಿದೆ.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮುಕುದೇವ್, ಮಾಸ್ಟರ್ ಬಿ. ಎ. ಕೆ. ಮೂರ್ತಿ ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಬಿ. ಆರ್. ಪಿ. ಕಾಳಿದಿ ಶ್ರೀಮತಿ ಕೆ. ಆರ್, ಶಾಂತಿಬಾಲಮ್ಮ. ಮುಂತಾದವರು ತಾರಾಗಣದಲ್ಲಿದ್ದಾರೆ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ

ಎದುರುನೋಡಿ

ನಿರ್ದೇಶಕರು— ಜಿ ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವನ್ನು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್ ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Ready Made! ರೆಡಿ ಮೇಡ್!

ಉಗಾದಿ ಹಬ್ಬಕ್ಕಾಗಿ ಸ್ಪೆಷಲ್ ಸೆಲೆಕ್ಷನ್!

ಹಬ್ಬಕ್ಕೆ ಡ್ರೆಸ್ ಬೇಕಲ್ಲವೆ!

ಒಟ್ಟಿಗನ್ನು ಕೊಂಡು ಕೊಂಡು, ಕತ್ತಿನ ಹೊಲಿಸುವ ತೊಂದರೆ ತಪ್ಪಿಸಿದ್ದೇವೆ.

— ಒಂದು ಪರೀಕ್ಷಿಸಿರಿ —

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ಜ್ಯುಯಲರ್ಸ್ ಅಂಡ್ ರೆಡಿಮೇಡ್ ಡ್ರೆಸ್ ಎಂಪೋರಿಯಂ

ಸಯ್ಯಾಜಿರಾವ್ ರೋಡ್, ಮೈಸೂರು.

ಎಲ್ಲಾ ವಿಧವಾದ ಜವಾಹಿರಿ ನಗಗಳಿಗೂ ನಂಬಿಕೆಯಾದ ಅಂಗಡಿ.

Edited, Printed & published by M. S. Krishna Rao, at the Satyavadi Press. Chamaraj Agrahar, Mysore.

ರಣರಂಗ

ಉತ್ತರ ಆಫ್ರಿಕಾದಲ್ಲಿ ರಷ್ಯನರ ಕೈ ಮೇಲಾಗಿರುವುದು. ಮೂರು ದಿವಸದಿಂದ ನಾಜಿಗಳು ಕಷ್ಟಪಟ್ಟು ಸಾಹಸ ಪಟ್ಟಾ ವ್ಯರ್ಥವಾಯಿತು. ಕೆ. ಬಾಗದಲ್ಲಿ ಗುಳಿಯಾದ್ದರಿಂದ ಕೆಲಸ ಕಾರ್ಯಗಳಿಗೆ ಅಡಚಣೆಯಾಯಿತು. ಕೆ. ಬಾಗದಲ್ಲಿ ಅಮೆರಿಕನ್ ಹೆಂಗಸರನ್ನೂ ಗಂಡಸರನ್ನೂ ನಾಜಿಗಳು ಕೊಂದಿರುವರು. ಎರಡನೇ ರಣರಂಗವನ್ನು ರಷ್ಯನರು ಎದುರುನೋಡುತ್ತಿರುವರು.

ಜನರಲ್ ಕಟ್ರೋರವರೂ ಜನರಲ್ ಡಿಗಾಲ್‌ರವರೂ ಉತ್ತರ ಆಫ್ರಿಕಾದಲ್ಲಿ ಫ್ರೆಂಚ್ ಎಂಪೈರನ್ನು ಸ್ಥಾಪಿಸಲು ಯತ್ನಮಾಡುತ್ತಿರುವರೆಂದು ತಿಳಿಯುಬಂದಿದೆ. ಬ್ರಿಟಿಷ್ 8 ನೇ ಪಡೆಯು ಸ್ಫಾಕ್ಸ್‌ರೇವನ್ನು ಆಕ್ರಮಿಸಿಕೊಂಡಿದೆ. ಓಡುತ್ತಿರುವ ರೋಮೆಲ್ ಸೈನ್ಯವನ್ನು ಮಿತ್ರಪಕ್ಷದವರು ಓಡಿಸಿಕೊಂಡು ಹೋಗುತ್ತಿರುವರು. ಇಟಲಿ ಸೈನ್ಯದವರನ್ನು ಸೆರೆಹಿಡಿದಿರುವರು. ಇಟಲಿ ಕಡೆಯ ಮುಖ್ಯ ಸೇನಾಧಿಪತಿಯೂ ಸಹ ಸಿಕ್ಕಿಬಿದ್ದಿರುವನು. ಮಿತ್ರಪಕ್ಷದವರು ನಿಂಡೂನಲ್ಲಿ ಯುದ್ಧ ಮಾಡುತ್ತಿರುವರು, ಆಕ್ಸಿಸ್ ಸೈನ್ಯವು ಉತ್ತರದಲ್ಲಿ ಚಲ್ಲಾಪಿಲ್ಲಿಯಾಗುತ್ತಿವೆ. ಸಾಫಿಕಕ್ಸಿನ ಹತ್ತಿರವಿರುವ ಎಲ್ಲಾ ವಿಮಾನ ನಿಲ್ದಾಣಗಳನ್ನೂ ನಾಜಿಗಳು ತ್ಯಜಿಸಿರುತ್ತಾರೆ.

ಸಂಸ್ಥಾನದ ಸುದ್ದಿಗಳು

ಬೆಂಗಳೂರು ಕಂಟ್ರೋಲರ್ ಆಫೀಸಿನಲ್ಲಿ ಗುಮಾಸ್ತರಾಗಿದ್ದ ಶ್ರೀ ಎಸ್. ಪುಟ್ಟಯ್ಯ, ವಿ. ವೇಣುಗೋಪಾಲ ನಾಯಿಡು, ಬಿ. ಹನುಮಂತಯ್ಯ ಬಿ. ಎಸ್ಸಿ. ಈ ಮೂವರೂ ಇನ್ನು ಆರು ತಿಂಗಳು ಸರ್ಕಾರಿ ಇಲಾಖೆಗಳಲ್ಲಿ ಕೆಲಸಮಾಡಲು ಅನರ್ಹರೆಂದು ಸರ್ಕಾರವವರು ಆಜ್ಞೆ ಮಾಡಿರುವರು.

ನಿನ್ನೆ ದಿವಸ ನಮ್ಮ ದಿವಾನರು ಆಗಮಿಸಿ, ಮಹಾರಾಜರವರನ್ನು ಸಂದರ್ಶಿಸಿ, ನೀಲಗಿರಿಗೆ ಪ್ರಯಾಣ ಮಾಡುವರು ಅಲ್ಲಿ ಮೂರು ವಾರ ಬಿಡಾರ ಮಾಡುವರೆಂದು ಹೇಳಲಾಗಿದೆ.

ಮಿ॥ ಬಿ. ಎಸ್. ಪುಟ್ಟಸ್ವಾಮಿಯವರನ್ನು ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನರಾಗಿ ನೇಮಿಸಿರುವರೆಂದು ತಿಳಿಯುಬರುವುದು.

ಬೆಂಗಳೂರಿನಲ್ಲಿ ಕೆಲವು ದಿವಸವಿರಲು ಮಿ॥ ಸಿ. ರಾಜಗೋಪಾಲಾಚಾರ್ಯರು ಬಂದಿರುವರು.

ಸೂಚನೆ— ಕಳೆದ ಶನಿವಾರದ ಪತ್ರಿಕೆಯಲ್ಲಿ ಬಿಡಿ ಪ್ರತಿ 3 ಪೈ ಎಂದು ತಪ್ಪಿ ಬಿದ್ದಿದೆ ಅದನ್ನು ದಯವಿಟ್ಟು 6 ಪೈ ಎಂದು ತಿದ್ದಿಕೊಳ್ಳಬೇಕೆಂದು ಕೋರುತ್ತೇವೆ.

Opera ಎನೆ ಆಮೋಘ ಪಾರ. Manonmani

ಅಪೇರಾ 2-4-43 ರಿಂದ

ಮನೋನ್ಮಣಿ

ಪಿ.ಯು. ಚಿನ್ನಪ್ಪ, ಟಿ.ಆರ್. ರಾಜಕುಮಾರಿ, ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್. ಕೃಷ್ಣ ಟಿ.ಎ. ಮಧುರಂ, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವರು.

ಬೆಂಗಳೂರಿನಲ್ಲಿ .... 12 ವಾರ ನಡೆಯಿತು

ಮದರಾಸಿನಲ್ಲಿ .... ಮಧುರೆಯಲ್ಲಿ

22 ನೇ ವಾರ ನಡೆಯುತ್ತಿದೆ

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಪಟಿಕ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ;

ಶ್ರೀನಿವಾಸವಾಂಧ್ರ ಭವನ

ಆಶೋಕ ರಸ್ತೆ ಮೈಸೂರು

ಪಿ. ಮಂಜಪ್ಪ ಮಾರ್ಕೆಂಟ್

ಮಂಗಳೂರು ಗಣಪತಿ, ಸುವರ್ಣಾ ಗಣಾನನ ಬ್ರಿಡಿಗೆಳನ್ನೆ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು.

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore.